ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ನೀಡಲಾದ ಬಾಯಿಮಾತಿನ ಉತ್ತರಗಳು
ಕಾರ್ಮಿಕರ ಕಲ್ಯಾಣ ನಿಧಿ ಬಗ್ಗೆ

೭೨೯. ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಕಂದಾಯ, ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೧. ಕಾರ್ಮಿಕರಿಂದ ಒಟ್ಟು ತಲಾ ರೂಪಾಯಿ ಳರಂತೆ ಕಾರ್ಮಿಕ ಕಲ್ಯಾಣ ನಿಧಿಗೆ ನಾನಾತರದ ಕಾರ್ಖಾನೆ ಹಾಗೂ ಸಂಸ್ಥೆಗಳಿಂದ ವಸೂಲಾದ ಹಣ ಎಷ್ಟು ?

೨. ಈ ಕಲ್ಯಾಣ ನಿಧಿಯಿಂದ ಕಾರ್ಮಿಕರಿಗೆ ಇದುವರೆವಿಗೂ ಪರಿಹಾರ ಕೊಟ್ಟಿರತಕ್ಕ ಹಣ ವೆಷ್ಟು ? ಹಾಗೂ ಯಾವ ಯಾವ ಬಾಬುಗಳಿಗೆ ಎಷ್ಟು ಕೊಡಲಾಗಿದೆ ?

೩. ಅಯಾಯ ಕಾರ್ಖಾನೆಗಳಿಂದ ಕಲ್ಯಾಣ ನಿಧಿಯಲ್ಲಿ ಜಮೆಯಾಗಿರತಕ್ಕ ಹಣವನ್ನು ಕಾರ್ಮಿಕರ ಕುಟುಂಬಗಳಿಗೆ ವೈದ್ಯಾಪ್ಯ ವೇತನ ಮರಣ ಫಂಡ್ (ಡೆತ್‌ರಿಲೀಫ್) ಕ್ಯಾನ್ಸರ್. ಟಿ. ಬಿ. ರೋಗಿಗಳಿಗೆ ಕೊಡಲಾಗಿದೆಯೇ, ಹಾಗಿಲ್ಲದಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈ ಕೊಳ್ಳುವ ಕ್ರಮವೇನು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಯೋಜನಾ ಮತ್ತು ಕಾರ್ಮಿಕ ಸಚಿವರು).—

೧. ಕಾರ್ಮಿಕರಿಂದ ಮಾಲೀಕರಿಂದ ಹಾಗೂ ರಾಜ್ಯ ಸರ್ಕಾರದ ಆಂಶದಾನ ಕ್ರಮವಾಗಿ ರೂ. ೧: ೨; ೧ ರಂತೆ ಇಲ್ಲಿಯವರೆಗೆ ವಸೂಲು ಮಾಡಲ್ಪಟ್ಟ ಕಲ್ಯಾಣ ನಿಧಿಯ ಮೊತ್ತ ರೂ. ೧, ೮೦, ೧೮, ೧೪೧–೨೭.

೨. ೧೯೮೧–೮೨ ರಿಂದ ೧೯೮೬–೮೭ರವರೆಗೆ ಕಾರ್ಮಿಕರ ಮಕ್ಕಳಿಗಾಗಿ ವಿದ್ಯಾರ್ಥಿ ಯೋಜನೆಯಲ್ಲಿ ಸುಮಾರು ರೂ. ೧೯,೬೮, ೭೭೫–೦೦ ಖರ್ಚು ಮಾಡಿದೆ.

೩. ಇಲ್ಲ. ವಿಶೇಷ ಸಂದರ್ಭ ಬಂದಲ್ಲಿ ಮಂಡಳಿಯು ಮುಂದೆ ಮುಂಡಿಸಿ ಈ ಬಗ್ಗೆ ತೀರ್ಮಾನ ಕೈಗೊಳ್ಳಲಾಗುವುದು.

(ಶ್ರೀ ಕೆ. ಕುಶಾಲ ಅವರ ಪ್ರಶ್ನೆಯನ್ನು ಶ್ರೀ ಬಿ. ಎಂ. ಇದಿನಬ್ಬ ಅವರು ಕೇಳಿದರು)

ಶ್ರೀ ಬಿ. ಎಂ. ಇದಿನಬ್ಬ.—ಸುಳ್ಯ ವಿಧಾನ ಸಭಾ ಕ್ಷೇತ್ರದಲ್ಲಿ ಮತ್ತು ಪುತ್ತೂರು ತಾಲ್ಲೂಕಿನ ಕರ್ನಾಟಕ ರಬ್ಬರು ಪ್ಲಾಂಟೇಷನ್‌ನಲ್ಲಿ ದುಡಿಯುತ್ತಿರುವ ಕೃಷಿ ಕಾರ್ಮಿಕರು ಬಹಳ ಸಂಖ್ಯೆಯಲ್ಲಿ ಇದ್ದಾರೆ, ಆದರೆ ಅವರಿಗೆ ವಾಸ್ತವ್ಯ ಮಾಡಲು ಮನೆ ಮತ್ತು ಇತರೇ ಸೌಲಭ್ಯಗಳ ಬಗ್ಗೆ ಕೇಳಿದ್ದಕ್ಕೆ ತಮ್ಮ ಉತ್ತರದಲ್ಲಿ ಇಲ್ಲ ಎಂದು ಹೇಳಿದ್ದೀರಿ. ಈ ಕೃಷಿ ಕಾರ್ಮಿಕರಿಗೆ ಎಲ್ಲ ರೀತಿಯ ಸೌಲಭ್ಯ ಕೊಡಲಿಕ್ಕೆ ಏನಾದರು ಆಲೋಚನೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಜನತಾ ಮನೆಗಳ ಯೋಜನೆ ಯಡಿಯಲ್ಲಿ ಇವರಿಗೆ ಮನೆಗಳನ್ನು ಕಟ್ಟಿಕೊಡತಕ್ಕ ವ್ಯವಸ್ಥೆ ಇದೆ. ಆದ್ದರಿಂದ ಆ ಯೋಜನೆಯ ಅಡಿಯಲ್ಲಿ ಅರ್ಜಿ ಹಾಕಿಕೊಂಡರೆಅವರಿಗೂ ಸಹ ಮನೆಗಳನ್ನು ಕೊಡುತ್ತೇವೆ

ಪ್ರಶ್ನೆ ೭೦೬ ಸದಸ್ಯರು ಗೈರು ಹಾಜರು

ಪ್ರಶ್ನೆ ೭೪೫ ಸದಸ್ಯರು ಗೈರು ಹಾಜರು

ಹುಂಡೇಕರ್ ಸಮಿತಿಯ ವರದಿ

೭೫೫. ಶ್ರೀ ವಿಶ್ವನಾಥಪಾಟೀಲ್ ಹೆಬ್ಬಾಳ.—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತಾಲ್ಲೂಕಾ ಹಾಗೂ ಜಿಲ್ಲಾ ಪುನರ್ವಿಂಗಡಣೆಗಾಗಿ ನೇಮಿಸಲಾದ ಹುಂಡೇಕರ್ ಸಮಿತಿಯವರು ತಮ್ಮ ವರದಿಯನ್ನು ಸರಕಾರಕ್ಕೆ ಸಲ್ಲಿಸಿದ್ದಾರೆಯೇ ?

ಅ) ಹಾಗಿದ್ದಲ್ಲಿ ಅದರಲ್ಲಿರುವ ಶಿಫಾರಸನ್ನು ಈ ವರ್ಷದಿಂದ ಜಾರಿಗೆ ತರಲಾಗುವುದೇ ? ಹಾಗಿಲ್ಲದಿದ್ದಲ್ಲಿ ಯಾವಾಗ ಅದನ್ನು ಜಾರಿಗೆ ತರಲಾಗುವುದು?

ಇ) ಹುಂಡೇಕರ್ ಸಮಿತಿ ತನ್ನ ಮೊದಲನೆ ಹಂತದ ವರದಿಯಲ್ಲೂ ಚಿತ್ತಾಪುರ ತಾಲ್ಲೂಕನ್ನು ವಿಂಗಡಿಸಿ ಕಾಳಗಿಯನ್ನು ಹೊಸ ತಾಲ್ಲೂಕನ್ನಾಗಿ ರಚಿಸಲು ತಿಳಿಸಿರುವುದು ನಿಜವಿದ್ದಲ್ಲಿ ಬೆಂಗಳೂರು ಗ್ರಾಮೀಣ ಜಿಲ್ಲೆ ರಚಿಸಿದಂತೆ ಜನತೆ ಅನುಕೂಲಕ್ಕಾಗಿ ಕಾಳಗಿ ತಾಲ್ಲೂಕನ್ನಾಗಿ ರಚಿಸಲು ಕ್ರಮಕೈಗೊಳ್ಳಲಾಗುವುದೇ ?

ಶ್ರೀ ಎಸ್. ಆರ್, ಬೊಮ್ಮಾಯಿ (ಕಂದಾಯ, ಯೋಜನಾ ಹಾಗೂ ಕಾರ್ಮಿಕ ಸಚಿವರು).—

ಅ) ಹೌದು.

ಆ) ಹುಂಡೇಕರ್ ಸಮಿತಿಯಂ ಸಲ್ಲಿಸಿರುವ ವರದಿಯು ಸರ್ಕಾರದ ಪರಶೀಲನೆಯಲ್ಲಿದ್ದು ಅದನ್ನು ಜಾರಿಗೆ ತರುವ ಬಗ್ಗೆ ಅಂತಿಮ ತೀರ್ಮಾನವನ್ನು ಸೂಕ್ತ ಸಮಯದಲ್ಲಿ ತೆಗೆದು ಕೊಳ್ಳಲಾಗುವುದು.

ಇ) ಹುಂಡೇಕರ್ ಸಮಿತಿಯಂವರು ಇತರೆ ಶಿಫಾರಸ್ಸುಗಳೊಂದಿಗೆ, ಚಿತ್ತಾಪುರ ತಾಲ್ಲೂಕನ್ನು ವಿಭಜಿಸಿ ಕಾಳಗಿ ತಾಲ್ಲೂಕನ್ನಾಗಿ ರಚಿಸಲು ಶಿಫಾರಸು ಮಾಡಿದ್ದು, ಈ ಶಿಫಾರಸಿನ ಬಗ್ಗೆ ತೀರ್ಮಾನವನ್ನು ಸರ್ಕಾರವು ಸೂಕ್ತ ಸಮಯದಲ್ಲಿ ತೆಗೆದುಕೊಳ್ಳುವುದು.

ಶ್ರೀ ವಿಶ್ವನಾಥ್ ಪಾಟೀಲ್ ಹೆಬ್ಬಾಳ್.—ಈ ವರದಿಯನ್ನು ಈ ಮನೆಯಲ್ಲಿ ಯಾವಾಗ ಮಂಡಿಸಲಾಗುವುದು ? ಸರಿಯಾದ ಸಮಯದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಹೇಳಿದ್ದೀರಿ. ಸೂಕ್ತ ಸಮಯ ಅಂದರೆ ಯಾವಾಗ ? ಈ ವರ್ಷ ೩೧ನೇ ತಾರೀಖು ಮಾರ್ಚಿಯಲ್ಲಿ ಮಾಡುತ್ತೀರಾ ? ಅಥವಾ ೧೯೮೭–೮೮ ನೇ ಇಸವಿಯಲ್ಲಿ ಮಾಡುತ್ತೀರಾ ? ಸೂಕ್ತ ಸಮಯ ಅಂದರೆ ಐವತ್ತು ವರ್ಷದ ಮೇಲೂ ಆಗಬಹುದು. ಆದ್ದರಿಂದ ಯಾವಾಗ ಎನ್ನುವುದನ್ನು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಸೂಕ್ತ ಸಮಯ ಅಂದರೆ ಆದಷ್ಟು ಬೇಗ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾನು ಒಂದು ಉಪ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಇದು ಬಹಳ ಮಹತ್ವವಾದಂಥ ಪ್ರಶ್ನೆ. ಶ್ರೀಮಾನ್ ಹುಂಡೇಕರ್ ಅವರು ರಿಪೋರ್ಟ್ ಕೊಟ್ಟು ಒಂದು ವರ್ಷ ಆಗುತ್ತಾ ಬಂದಿದೆ. ಇದಕ್ಕಿಂತಲೂ ಮುಂಚೆ ಮಾನ್ಯ ಮುಖ್ಯಮಂತ್ರಿಗಳಿಗೆ ಮತ್ತು ರೆವಿನ್ಯೂ ಮಂತ್ರಿಗಳಿಗೆ ನಾನು ಒಂದು ಸಲಹೆ ಕೊಟ್ಟಿದ್ದೆ. ಅದರ ಜೊತೆಗೆ ನಾನೇ ಸ್ವತಃ ತಮ್ಮನ್ನು ಭೇಟಿಯಾಗಿ ಹೇಳಿದ್ದೆ, ನಮ್ಮ ಉತ್ತರ ಕರ್ನಾಟಕ ಅದರಲ್ಲೂ ವಿಶೇಷವಾಗಿ ಧಾರವಾಡ, ಬಿಜಾಪುರ್, ಗುಲ್ಬರ್ಗ ರಾಯಚೂರು ಆ ಭಾಗಗಳನ್ನು ನೀವು ಅಭಿವೃದ್ಧಿಪಡಿಸಬೇಕಾದರೆ ಪ್ರತ್ಯೇಕ ಡಿವಿಜನ್‌ಗಳನ್ನು ಮಾಡಿದರೆ ಮಾತ್ರ ಸಾಧ್ಯ, ಇಲ್ಲದೇ ಇದ್ದರೆ ಸಾಧ್ಯವಿಲ್ಲ. ಸುಮಾರು ಒಂದೊಂದು ಜಿಲ್ಲೆ, ೩೦೦–೩೫೦ ಕಿಲೋಮೀಟರಷ್ಟು ವಿಡ್ತ್ ಅಂಡ್ ಬ್ರೆತ್ ಇದೆ. ಇವೊತ್ತು ಏನಾಗುತ್ತಿದೆಯೆಂದರೆ, ಪ್ರತಿಯೊಂದು ತಾಲ್ಲೂಕು ಅನ್ನು ಯೂನಿಟ್ ಎಂದು ತೆಗೆದುಕೊಂಡು ಡೆವಲಪ್‌ಮೆಂಟ್ ವರ್ಕ್ಸ್ ಅನ್ನು ಅಂದರೆ ಅದು ಆಸ್ಪತ್ರೆ ಆಗಬಹುದು, ವಾಟರ್‌ಸಪ್ಲೈ ಸ್ಕೀಮ್ ಆಗಬಹುದು. ಕೊಡುತ್ತಿದ್ದೀರಿ. ಇದರಿಂದ ಏನಾಗುತ್ತದೆ, ಅಂದರೆ, ಎಲ್ಲಿ ಚಿಕ್ಕ ಡಿಸ್ಪ್ರಿಕ್ಟ್ ಇದೆ. ಅಲ್ಲಿ ತಾಲ್ಲೂಕು ಯೂನಿಟ್ ಮಾಡಿಕೊಂಡು ಕೊಡುತ್ತಿದ್ದೀರಿ. ಇದರಿಂದ ಏನಾಗುತ್ತದೆ ಅಂದರೆ ಡೆವಲಪ್‌ಮೆಂಟ್ ವರ್ಕ್ಸ್ ಕಡಿಮೆಯಾಗುತ್ತದೆ. ಆದರಿಂದ ಆ ಭಾಗ ಹಿಂದೆ ಬೀಳುತ್ತಕ್ಕದ್ದು ಆಗುತ್ತದೆ. ಆದ್ದರಿಂದ, ದಯವಿಟ್ಟು ಇದನ್ನು ಜಾಗ್ರತೆಯಾಗಿ ಇಂಪ್ಲಿಮೆಂಟ್ ಮಾಡತಕ್ಕ ವ್ಯವಸ್ಥೆ ಮಾಡುತ್ತೀರಾ ? ಇಲ್ಲವೇ ? ಕನಿಷ್ಟಪಕ್ಷ ಅಲ್ಲಿ ಡೆವಲಪ್‌ಮೆಂಟ್‌ಗೋಸ್ಕರ ಆಕ್ಟಿವಿಟೀಸ್ ಹೆಚ್ಚು ಆಗಬೇಕೆಂದು ಇರತಕ್ಕ ಈ ಒಂದು ರಿಪೋರ್ಟ್‌ನ್ನು ನಿಮ್ಮ ಕಣ್ಣೆದುರಿಗೆ ಇಟ್ಟುಕೊಂಡು ಹಣವನ್ನು ಯಾವರೀತಿ ಬಿಡುಗಡೆ ಮಾಡುತ್ತೀರಾ ಹೇಳಿ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಕೆಲವು ಜಿಲ್ಲೆಗಳು ಬಹಳ ದೊಡ್ಡದಾಗಿ ವಿಸ್ತಾರವಾಗಿವೆ ಮತ್ತೆ ಕೆಲವು ಜಿಲ್ಲೆಗಳು ಚಿಕ್ಕವಾಗಿವೆ. ಮಾನ್ಯ ಸದಸ್ಯರು ಹೇಳಿದಂತೆ ಅಭಿವೃದ್ಧಿ ಕಾರ್ಯಕ್ರಮಗಳ್ಳ ಬೇರೆ ಬೇರೆ ಕಾರಣಗಳಿಂದ ಕುಂಠಿತವಾಗಿವೆ. ಸರ್ಕಾರದ ಅಭಿಪ್ರಾಯದಲ್ಲಿ ಜಿಲ್ಲೆಗಳ ಪುನರ್

ವಿಂಗಡಣೆ ಕಾರ್ಯ ಅವಶ್ಯಕವೆಂದು ತಿಳಿದು ನಾವು ಒಂದು ಸವಿಂತಿಯನ್ನು ನೇಮಕ ಮಾಡಿದ ವೇಲೆ ಆ ಸವಿಂತಿಯ ವರದಿ ಕೂಡ ಬಂದಿದೆ. ಆದರ ಬಗ್ಗೆ ಆದಷ್ಟುಬೇಗ ನಾವು ತೀರ್ಮಾನ ತೆಗೆದುಕೊಳ್ಳುತ್ತೇವೆ. ನನ್ನ ಗಮನಕ್ಕೆಬಂದಿರುವಂತೆ ಚಿಕ್ಕೋಡಿ ತಾಲ್ಲೂಕಿನಲ್ಲಿ ೩ ವಿಧಾನ ಸಭಾ ಕ್ಷೇತ್ರಗಳಿವೆ. ಹಿಂದೆ ಐ. ಆರ್. ಡಿ. ಪಿ, ಬೆನಿಫಿಟ್ಸ್ ಕೊಡುವಾಗ ಒಂದೊಂದು ತಾಲ್ಲೂಕಿಗೆ ೬೦೦ ಜನ ಎಂದು ಲೆಕ್ಕ ಮಾಡಿದ್ದೇವೆ. ೭ ಅಸೆಂಬ್ಲಿ ಕ್ಷೇತ್ರಗಳಿಗೆ ೧೧ ಕ್ಷೇತ್ರಗಳಾಗುತ್ತವೆಂಬುದನ್ನು ಮನಗಂಡು ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಪಟ್ಟಂತೆ ಮಂಡಲ ಎಂದು ಈಗ ಮಾಡುತ್ತಿದ್ದೇವೆ. ಕಳೆದ ಒಂದು ವರ್ಷದಿಂದ ಈ ಸಿಸ್ಟಂನ್ನು ತಂದಿದ್ದೇವೆ. ಪ್ರತಿಯೊಂದು ಮಂಡಲಕ್ಕೆ ಎಷ್ಟು ಹಣವನ್ನು ಬಿಡುಗಡೆ ಮಾಡಬೇಕೋ ಅಷ್ಟು ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ. ಬೆಳಗಾಂ ಜಿಲ್ಲೆಯಲ್ಲಿ ಹೆಚ್ಚು ಕಬ್ಬನ್ನು ಬೆಳೆಯುತ್ತಾರೆ. ಖಾನಪುರ ವಿಚಾರದಲ್ಲಿ ಕೂಡ ಇದೇ ಅಭಿಪ್ರಾಯ ಬಂತು. ಆದ್ದರಿಂದ ಈ ಮಂಡಲದ ಆಧಾರದ ಮೇಲೆ ನಾವು ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ಮೈಸೂರು ಜಿಲ್ಲೆಯಲ್ಲಿ ಮೈಸೂರನ್ನೇ ಒಂದು ಜಿಲ್ಲೆ, ನಂಜನಗೂಡನ್ನೇ ಒಂದು ಜಿಲ್ಲೆ ಎಂದು ಮಾಡಬೇಕೆಂದು ಶಿಫಾರಸು ಬಂದಿದೆಯೆಂದು ನಾನು ಕೇಳಿದ್ದೇನೆ. ಡೆವಲಪ್‌ಮೆಂಟ್ ಆ್ಯಕ್ಟಿವಿಟೀಲ್ ಜೊತೆಗೆ ಇನ್ನೂ ಬೇರೆ ಬೇರೆ ವಿಚಾರಗಳು ಇಲ್ಲಿ ಬರುತ್ತವೆ. ಆದ್ದರಿಂದ ಇವರ ಬಗ್ಗೆ ಯಾವಾಗ ನೀವು ತೀರ್ಮಾನವನ್ನು ತೆಗೆದುಕೊಳ್ಳುತ್ತೀರೆಂದು ತಿಳಿಸುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಆದಷ್ಟುಬೇಗ.

ರಾಜ್ಯದಲ್ಲಿ ನಿರುದ್ಯೋಗಿ ಸಮಸ್ಯೆ

೬೬೧ (೫) ಶ್ರೀ ಐ. ಬಿ. ಶಂಕರ್ (ಚಿಕ್ಕಮಗಳೂರು).—ಮಾನ್ಯ ಕಂದಾಯ ಯೋಜನಾ ಹಾಗೂ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಿನಾಂಕ ೧-೧-೮೭ ರಂದು ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ನೋಂದಾಯಿಸಿದ ನಿರುದ್ಯೋಗಿ, ಪದವೀಧರರು, ಪದವಿಯೇತರರು ಮಂತ್ರಿ ವೃತ್ತಿ ಪದವೀಧರರ ಸಂಖ್ಯೆ,

ಆ) ರಾಜ್ಯದಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಎಸ್. ಆರ್. ಬೊಮ್ಮಾಯಿ, (ಕಂದಾಯ, ಯೋಜನಾ ಮತ್ತು ಕಾರ್ಮಿಕ ಸಚಿವರು).—

ಅ) ದಿನಾಂಕ ೧-೧-೮೭ ರಂದು. ೭೬,೫೦೨ ಪದವೀಧರರು, ೫೬,೯೯೨ ಪದವಿಯೇತರರು. ಮತ್ತು ೩೧,೧೯೪ ವೃತ್ತಿ ಪದವೀಧರರು ರಾಜ್ಯದ ಉದ್ಯೋಗ ವಿನಿಮಯ ಕೇಂದ್ರಗಳಲ್ಲಿ ಉದ್ಯೋಗ ಸಹಾಯಕ್ಕಾಗಿ ನೋಂದಾಯಿಸಿ ಕೊಂಡಿದ್ದರು.

ಆ) ಎಲ್ಲಾ ನಿರುದ್ಯೋಗಿಗಳಿಗೂ ಅದರಲ್ಲೂ ವಿದ್ಯಾವಂತ ನಿರುದ್ಯೋಗಿಗಳಿಗೆ ವೇತನದ ಉದ್ಯೋಗಗಳು ದೊರಕುವುದು ಕಷ್ಟವಾಗಿರುವುದರಿಂದ ಬ್ಯಾಂಕಿಂಗ್ ಹಾಗೂ ಹಣಕಾಸು ಸಂಸ್ಥೆಗಳು ಒದಗಿಸುವ ಸಾಲ ಮತ್ತು ಇನ್ನಿತರ ಸೌಲಭ್ಯಗಳನ್ನು ಉಪಯೋಗಿಸಿ ಕೊಂಡು ಸ್ವಯಂ ಉದ್ಯೋಗದಲ್ಲಿ ನಿರತರಾಗಬೇಕು, ಈ ಬಗ್ಗೆ ವಿದ್ಯಾವಂತ ನಿರುದ್ಯೋಗಿಗಳಿಗೆ ಅಗತ್ಯವಿರುವ ಉತ್ತೇಜನ ಸರ್ಕಾರ ದೊರಕಿಸಿ ಕೊಡುತ್ತದೆ.

ಸ್ವಾಮಿ, ನಿರುದ್ಯೋಗ ಸಮಸ್ಯೆ ಎಂಬುದು ರಾಷ್ಟ್ರೀಯ ಸಮಸ್ಯೆ. ಇದು ಬೃಹದಾಕಾರವಾಗಿ ಬೆಳೆದಿದೆ. ಇದಕ್ಕೆ ಸಂಬಂಧಪಟ್ಟಂತೆ ನಮ್ಮ ರಾಜ್ಯ ಸರ್ಕಾರವು ಏನು ಕ್ರಮ ತೆಗೆದು ಕೊಳ್ಳಬೇಕೋ ಅದನ್ನೆಲ್ಲಾ ತೆಗೆದುಕೊಂಡಿದ್ದೇವೆ.

ಶ್ರೀ ಐ. ಬಿ. ಶಂಕರ್.—ಬ್ಯಾಂಕ್‌ಗಳ ಮಾಜಿಖಾಂತರ ಆವರಿಗೆ ಸಹಾಯಧನವನ್ನು ಒದಗಿಸಿ ಕೊಡುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಹಾಗೆ ಸಹಾಯಧನ ಕೊಟ್ಟವರ ಹೆಸರನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ಹಾಗೆಯೇ ಇಟ್ಟುಕೊಳ್ಳುತ್ತೀರಾ ? ಅಥವಾ ಅವರ ಹೆಸರನ್ನು ತೆಗೆದುಹಾಕುತ್ತೀರಾ ?